**ಸಿ.ಸಿ.ನಂ.: 1447/2025**

ಪಿ.ಡಬ್ಲ್ಯೂ:1

(ಇಂದು ದಿನಾಂಕಃ **26-02-2026** ರಂದು ಸತ್ಯ ಪ್ರತಿಜ್ಞೆಯ ಮೇರೆಗೆ ಪ್ರಮಾಣ ವಚನ ಬೋಧಿಸಲಾಯಿತು.)

**ಮುಂದುವರಿದ ಪಾಟೀ ಸವಾಲು -ಆರೋಪಿ ಪರ ಶ್ರೀ. ರಂಜನ ನಾಯ್ಕ ವಕೀಲರಿಂದ**

1. ಆರೋಪಿತನು ವ್ಯವಹಾರವನ್ನು ಮಾಡುತ್ತಾನೆ ಎಂದು ನನಗೆ ತಿಳಿಸಿರುತ್ತಾರೆ. ಈ ಕುರಿತಾಗಿ ಯಾವುದೇ ದಾಖಲಾತಿಯನ್ನು ಪಡೆದುಕೊಂಡಿರುವುದಿಲ್ಲ. ಆರೋಪಿತನು ವ್ಯವಹಾರವನ್ನು ಮಾಡುತ್ತಾನೆ ಎಂಬುವುದನ್ನು ನಿಪಿ7 ನ್ನು ನೋಡಿ ಹೇಳಿರುತ್ತೇನೆ. ನಿಪಿ7 ರಲ್ಲಿ ಆತನ ವ್ಯವಹಾರದ ಕುರಿತು ಹಾಗೂ ಅದರ ಸ್ಥಳದ ಕುರಿತಾಗಿ ನಮೂದು ಇಲ್ಲ ಎಂದರೆ ಸರಿ.

2. ಪಿಗ್ಮಿ ಖಾತೆ ಸಂಖ್ಯೆ ಎಫ್ 0 221 ಹರೀಶ ನಾಗೇಶ ನಾಯ್ಕ ಇವರ ಹೆಸರಿನಲ್ಲಿ ಇದೆ. ಪಿಗ್ಮಿ ಖಾತೆಯು ಯಾವಾಗಿನಿಂದ ತೆಗೆದಿತ್ತು ಎಂಬ ಬಗ್ಗೆ ದಾಖಲಾತಿಯನ್ನು ನೋಡಿ ಹೇಳಬೇಕಾಗುತ್ತದೆ. ಈ ಪಿಗ್ಮಿ ಖಾತೆಯು ಈಗ ಚಾಲ್ತಿಯಲ್ಲಿ ಇದ್ದು ಆರೋಪಿತನು ಅದಕ್ಕೆ ಹಣವನ್ನು ಭರಣ ಮಾಡುತ್ತಿಲ್ಲ. ಈ ಕುರಿತಾಗಿ ಯಾವುದೇ ದಾಖಲಾತಿಯನ್ನು ನ್ಯಾಯಾಲಯಕ್ಕೆ ಹಾಜರುಪಡಿಸಿಲ್ಲ ಎಂದರೆ ಸರಿ. ಪಿಗ್ಮಿ ಖಾತೆಗೆ ಯಾವ ದಿನಾಂಕದಂದು ಕೊನೇಯದಾಗಿ ಹಣ ಭರಣ ಆಗಿದೆ ಎಂದು ನಾನು ಖಾತೆ ಉತಾರನ್ನು ನೋಡಿ ಹೇಳಬೇಕಾಗುತ್ತದೆ. ಈ ಪಿಗ್ಮಿ ಖಾತೆಯು 2022 ರ ಪೂರ್ವದಲ್ಲಿ ಚಾಲ್ತಿಯಲ್ಲಿ ಇತ್ತು ಎಂದರೆ ಸರಿ. 2022 ರ ಪೂರ್ವದಲ್ಲಿ ಪಿಗ್ಮಿ ಖಾತೆಯಲ್ಲಿ ಎಷ್ಟು ಹಣ ಇತ್ತು ಎಂಬ ಬಗ್ಗೆ ದಾಖಲಾತಿಯನ್ನು ನೋಡಿ ಹೇಳಬೇಕಾಗುತ್ತದೆ.

3. ನಿಪಿ8 ರಲ್ಲಿ ವಿಮಾ ಪಾಲಿಸಿ ಸಂಖ್ಯೆ ಇದ್ದು ಸದ್ರಿ ವಿಮಾ ಪಾಲಿಸಿ ಸಂಖ್ಯೆಯನ್ನು ಆರೋಪಿತನು ನಮಗೆ ಹೈಪೋಥಿಕೇಶನ ಮಾಡಿರುತ್ತಾರೆ. ಈ ಕುರಿತಾಗಿ ನಾವು Assignment ಮಾಡಿರುತ್ತೇವೆ. ಸದ್ರಿ ಪಾಲಿಸಿಯು ಎಷ್ಟು ಮೊತ್ತದು ಎಂಬ ಬಗ್ಗೆ ನನಗೆ ಗೊತ್ತಿಲ್ಲ. ಸದ್ರಿ ವಿಮಾ ಪಾಲಿಸಿಯ ಆಧಾರದ ಮೇಲೆ ಈ ಪ್ರಕರಣದ ಸಾಲದ ಕುರಿತು ವಸೂಲಾತಿಗೆ ಕ್ರಮ ಕೈಗೊಂಡಿರುವುದಿಲ್ಲ. ಈ ರೀತಿಯಾಗಿ ವಸೂಲು ಮಾಡಿಕೊಳ್ಳಲು ತೊಂದರೆ ಇತ್ತಾ ಎಂದರೆ ಸಾಕ್ಷಿಯು ಆರೋಪಿತನು ಕೇವಲ ಒಂದು ಕಂತುನ್ನು ಮಾತ್ರ ಪಾವತಿ ಮಾಡಿರುತ್ತಾನೆ ಎಂದು ನುಡಿಯುತ್ತಾರೆ. ವಿಮಾ ಪಾಲಿಸಿ, ಪಿಗ್ಮಿ ಖಾತೆ ಯ ಕುರಿತಾಗಿ ನಮ್ಮ ದೂರಿನಲ್ಲಿ ಹಾಗೂ ಮುಖ್ಯ ವಿಚಾರಣಾ ಪ್ರಮಾಣ ಪತ್ರದಲ್ಲಿ ನಮೂದಿಸಿಲ್ಲ ಎಂದರೆ ಸರಿ. ಪಿಗ್ಮಿ ಖಾತೆಯಲ್ಲಿ ಎಷ್ಟು ಹಣ ಜಮಾ ಆಗಿದೆ ಎಂಬ ಬಗ್ಗೆ ನನಗೆ ಮಾಹಿತಿ ಇಲ್ಲದೇ ಇರುವುದರಿಂದ ಅದನ್ನು ಮುಚ್ಚಿಟ್ಟಿದ್ದೇನೆ ಎಂದರೆ ಸರಿಯಲ್ಲ.

4. ನಿಪಿ2 ರ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ದಾಖಲಾತಿಗಳ ಆಧಾರದ ಮೇಲೆ ಹಾಗೂ ಹಿಂದಿನ ಶಾಖಾ ವ್ಯವಸ್ಥಾ.ಪಕರ ಮಾಹಿತಿಯ ಆಧಾರದ ಮೇರೆಗೆ ನನಗೆ ಮಾಹಿತಿ ಇದೆ ಎಂದು ನುಡಿಯುತ್ತಾರೆ. ನಿಪಿ 2 ಕ್ಕೆ ಆರೋಪಿತನು ಸಹಿಯನ್ನು ಮಾಡಿರಬಹುದು ಆದರೆ ನನಗೆ ಈ ಕುರಿತಾಗಿ ವಯಕ್ತಿಕ ಮಾಹಿತಿ ಇರುವುದಿಲ್ಲ. ನಿಪಿ 2 ನ್ನು ಯಾರು ಬರೆದರುತ್ತಾರೆ ಹಾಗೂ ಅದನ್ನು ಬರೆಯಲು ಯಾರು ಮಾಹಿತಿಯನ್ನು ನೀಡಿರುತ್ತಾರೆ ಎಂಬ ಬಗ್ಗೆ ನನಗೆ ವಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ದಾಖಲಾತಿಗಳ ಆಧಾರದ ಮೇಲೆ ಹೇಳುತ್ತೇನೆ ಎಂದು ನುಡಿಯುತ್ತಾರೆ.

5. ನಿಪಿ2 ರ ಬರವಣಿಗೆ ಹಾಗೂ ಅದರ ಸಹಿಗಳ ಕುರಿತಾಗಿ ಹಿಂದಿನ ಶಾಖಾ ವ್ಯವಸ್ಥಾಪಕರ ಮೌಖಿಕ ಹೇಳಿಕೆಯ ಆಧಾರದ ಮೇಲೆ ಹೇಳುತ್ತೇನೆ. ಅದೇ ರೀತಿ 2022 ನೇ ಸಾಲಿನಲ್ಲಿ ನಮ್ಮ ಈ

**ಸಿ.ಸಿ.ನಂ.: 1447/2025**

ಪಿ.ಡಬ್ಲ್ಯೂ:1

ಹಿಂದಿನ ಶಾಖಾ ವ್ಯವಸ್ಥಾಪಕರು ಈ ಪ್ರಕರಣದ ಸಾಲಕ್ಕೆ ಸಂಭಂಧಿಸಿದಂತೆ ಇರಲಿಲ್ಲ ಎಂದರೆ ಸರಿ. ಅವರ ಹಿಂದಿನ ಶಾಖಾ ವ್ಯವಸ್ಥಾಪಕರು ಇದ್ದರು ಎಂದು ನುಡಿಯುತ್ತಾರೆ. ಅದ್ದರಿಂದ ನನಗೆ ಯಾರು ಸಾಲವನ್ನು ನೀಡಿದ್ದ ಶಾಖಾ ವ್ಯವಸ್ಥಾಪಕರು ನನಗೆ ಮಾಹಿತಿಯನ್ನು ನೀಡಲಿಲ್ಲ ಎಂದರೆ ಸಾಕ್ಷಿಯು ಅವರು ಈಗ ನಮ್ಮ ಪ್ರಧಾನ ಕಛೇರಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿದ್ದು ಅವರೂ ಸಹ ಮಾಹಿತಿಯನ್ನು ನೀಡಿರುತ್ತಾರೆ ಎಂದು ನುಡಿಯುತ್ತಾರೆ.

**(ಈ ಹಂತದಲ್ಲಿ ಆರೋಪಿ ಪರ ವಕೀಲರು ಮುಂದುವರೆದ ಪಾಟೀ ಸವಾಲಿಗೆ ಸಮಯಾವಕಾಶ ಕೋರಿದ್ದರಿಂದ ಸಮಯವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಹೇಳಿಕೆಯಂತೆ ಬೆರಳಚ್ಚು ಮಾಡಿಸಲಾಯಿತು.)

ಓ.ಹೇ.ಕೇ. ಸರಿ ಇದೆ.

ಸಹಿ ಇದೆ.

ಹೆ.ಪ್ರ.ದ.ನ್ಯಾ.ದಂ. ಕುಮಟಾ